


ನಾನು ಪಟ್ಟಣಗಳಲ್ಲಿ ಪರಿಚಿತರ ಮನೆಗಳಿಗೆ ಹೋಗಲು ಹಿಂಜರಿಯುತ್ತೇನೆ, ನಮ್ಮ ಹಳ್ಳಿಯ ಮನೆಗಳ ರೀತಿ ಅಲ್ಲ ಎಂದು. ಆದರೆ ಹಂಪನಾ ಅವರ ಮನೆ ಹಳ್ಳಿಯ ಮನೆಯಲ್ಲಿ ರೀತಿಯಲ್ಲೇ ಆಪ್ತ ಅನ್ನಿಸುತ್ತಿತ್ತು. ಮನೆಗೆ ಹೋದಾಗ ಕಮಲಾ ಅವರು, ನಮ್ಮ ಅಮ್ಮನಿಂದ ನನ್ನ ಮೊಮ್ಮಕ್ಕಳವರೆಗೂ ಆರೋಗ್ಯ ಹೇಗಿದೆ ಎಂದು ವಿಚಾರಿಸುತ್ತಿದ್ದರು. ಮನೆಯ ಕೆಳಭಾಗವೇ ಮಗನ ಕಚೇರಿ ಇತ್ತು. ನಾವು ಪ್ರತಿಷ್ಠಾನದ ಮಾತುಕತೆಗಳಿಗೆ ಆ ಕಚೇರಿಯನ್ನೇ ಬಳಸಿಕೊಳ್ಳುತ್ತಿದ್ದೆವು.

ನಾನು ಬರೆದ 'ನಾ ಕಂಡ ತೇಜಸ್ವಿ–ಶಾಮಣ್ಣ' ಪುಸ್ತಕವನ್ನು ಅವರಿಗೆ ಕಳಿಸಿದ್ದೆ. ಪೂರ್ತಿ ಓದಿ, ಒಂದು ದಿನ ಫೋನ್ ಮಾಡಿದ ಕಮಲಾ ಅವರು, 'ಬರವಣಿಗೆ ತುಂಬಾ ಖುಷಿ ಕೊಡ್ತು, ಈವರೆಗೆ ಇಷ್ಟು ಹೊಟ್ಟೆ ಹುಣ್ಣಾಗುವಷ್ಟು ನಕ್ಕು ಯಾವ ಪುಸ್ತಕವನ್ನು ಓದಿರಲಿಲ್ಲ. ಅವರಿಬ್ಬರ ಸ್ವಭಾವವನ್ನು ಬಹಳ ಚೆನ್ನಾಗಿ ಚಿತ್ರಿಸಿದ್ದೀರಿ. ಮಂಚದ ಮೇಲೆ ಮಲಗಿ ಓದುವಾಗ ನನ್ನ ಹೊಟ್ಟೆ ಕುಣಿಯುತ್ತಿತ್ತು! ನಮ್ಮ ಜೊತೆ ಇರುವ ಪ್ರಕಾಶ್‌ಗೂ ಈ ರೀತಿ ಬರವಣಿಗೆ ಇದೆಯಲ್ಲಾ ಎಂದು ಖುಷಿ ಆಯ್ತು' ಅಂತ ಖುಷಿಯಿಂದ ಹೇಳಿಕೊಂಡರು.

ಕನ್ನಡ ವಿದ್ವತ್ ಪರಂಪರೆಯ ಪ್ರಮುಖರಲ್ಲೊಬ್ಬರಾದ ಕಮಲಾ ಹಂಪನಾ (ಅ. 28, 1935 – ಜೂನ್ 22, 2024) ಬರಹ, ಅಧ್ಯಾಪನ, ಭಾಷಣಗಳ ಮೂಲಕ ಸಹೃದಯರಿಗೆ ಪರಿಚಿತರು. ಕನ್ನಡ ಅಧ್ಯಾಪಕಿಯಾಗಿ, ಬೆಂಗಳೂರು ಮತ್ತು ಮೈಸೂರು ಮಹಾರಾಣಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಬೆಂಗಳೂರಿನ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದವರು. ಹಳಗನ್ನಡ ಗ್ರಂಥ ಸಂಪಾದನೆ, ಜೀವನ ಚರಿತ್ರೆ, ಕಥೆ, ಕಾವ್ಯ, ವ್ಯಕ್ತಿಚಿತ್ರ, ಮಕ್ಕಳ ಸಾಹಿತ್ಯ ಸೇರಿದಂತೆ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. 'ಬಿಂದಲಿ', 'ಬುಗುಡಿ', 'ನುಡಿಮಲ್ಲಿಗೆ', 'ಆ ಮುಖ', 'ಬಾಸಿಂಗ', 'ಬಾಂದಳ', 'ಬಿತ್ತರ', 'ಬೆಳ್ಳಕ್ಕಿ', 'ಬಾನಾಡಿ' ಅವರ ಕೆಲವು ಕೃತಿಗಳು.